

# ದಾಸ ಸಾಹಿತ್ಯದಲ್ಲಿ ಗಣಿತ

ಕಾರ್ತಿಕ್. ಎಂ

# ದಾಸ ಸಾಹಿತ್ಯದಲ್ಲಿ ಗಣಿತ

ಮೊದಲ ಮುದ್ರಣ

ಲೇಖಕರು
ಕಾರ್ತಿಕ್. ಎಂ

**ಪುಸ್ತಕದ ಶೀರ್ಷಿಕೆ: ದಾಸ ಸಾಹಿತ್ಯದಲ್ಲಿ ಗಣಿತ**

**ಮೊದಲ ಆವೃತ್ತಿ – 2025**

**ಕೃತಿಸ್ವಾಮ್ಯ 2025 © ಕಾರ್ತಿಕ್. ಎಂ**

No part of this book may be reproduced or transmitted in any form by any means, electronic or mechanical, including photocopy, recording or any information storage and retrieval system, without permission in writing from the copyright owners.

**Disclaimer**

The author is solely responsible for the contents published in this book. The publishers don't take any responsibility for the same in any manner. Errors, if any, are purely unintentional and readers are requested to communicate such errors to the author or publishers to avoid discrepancies in future.

**E-ISBN: 978-1-68576-602-3**

**MRP Rs. 160/-**

**Publisher, Printer & Distributor:**
Selfypage Developers Pvt Ltd.,
Pushpagiri Complex,
Beside SBI Housing Board,
K.M. Road Chikkamagaluru, Karnataka.
Tel.: +91-8861518868
E-mail: info@iipbooks.com

**IMPRINT: IIP Iterative International Publishers**

**For Sales Enquiries:**
Contact: +91- 8861511583
E-mail: sales@iipbooks.com

# ಶ್ರೀ ಶೃಂಗೇರಿ ಶಾರದಾಂಬೆಯ ಆಶೀರ್ವಾದದೊಂದಿಗೆ

ದಾಸ ಸಾಹಿತ್ಯದಲ್ಲಿ ಗಣಿತ

ನನ್ನ ಪರೋಕ್ಷ ಹಾಗೂ ಅಪರೋಕ್ಷ ವಿದ್ಯಾ ಗುರುಗಳಿಗೆ (ಅವರ ಜ್ಞಾನ ಪ್ರಕಾಶವು ನನ್ನ ಹಾದಿಯನ್ನು ಬೆಳಗಿಸಿದೆ)

ನನ್ನ ತಂದೆ, ತಾಯಿ, ಪತ್ನಿ, ಸಹೋದರಿಗೆ (ಅವರ ಪ್ರೀತಿ, ಸಹನೆ ಹಾಗೂ ನಿಸ್ವಾರ್ಥ ಬೆಂಬಲವಿಲ್ಲದೆ ಈ ಯತ್ನ ಸಾಧ್ಯವಾಗುತ್ತಿರಲಿಲ್ಲ) ಮತ್ತೆ ನನ್ನ ಶ್ರೇಯೋಭಿಲಾಷಿಗಳಿಗೆ, (ಅವರ ಹಿತವಚನ, ಪ್ರೋತ್ಸಾಹ ಮತ್ತು ಹಾರೈಕೆಗಳು ಸದಾ ನನ್ನ ಪಥಪ್ರದರ್ಶಕವಾಗಿದೆ)

# ಲೇಖಕರ ಮಾತು

ನಾನು ಗಣಿತ ಉಪನ್ಯಾಸಕನು ಅಲ್ಲ. ಗಣಿತಜ್ಞನೂ ಅಲ್ಲ. ದಾಸನಂತೂ ಅಲ್ಲವೇ ಅಲ್ಲ. ಜೀವನದ ಹೆಜ್ಜೆ ಗುರುತುಗಳನ್ನು ಹುಡುಕುತ್ತ ಸಾಗುತ್ತಿರುವ ಒಬ್ಬ ಸಾಮಾನ್ಯ ಮನುಷ್ಯ. ದಾಸ ಸಾಹಿತ್ಯದ ಕೀರ್ತನೆಗಳು ಜನಮಾನಸವನ್ನು ಅನೇಕ ದಶಕಗಳಿಂದ ಮುಟ್ಟುತ್ತ ಸಾಗಿದೆ. ಅವುಗಳಲ್ಲಿ ಕಂಡಭಕ್ತಿ, ತತ್ವಗಳು, ಜೀವನೋಪಾಯಗಳು ನನ್ನನ್ನು ಸ್ಪರ್ಶಿಸಿದೆ. ಆದರೆ ಅವುಗಳ ಮಧ್ಯೆ ಮುತ್ತಿನಂತೆ ಹೊಳೆಯುವ ಗಣಿತದ ಸುಳಿಯನ್ನು ಕಂಡಾಗ, ಅವುಗಳನ್ನು ಬರವಣಿಗೆಯಲ್ಲಿ ತರಬೇಕೆಂಬ ಆಸೆ ಒಡಮೂಡಿತು.

ಈ ಪುಸ್ತಕ ನನ್ನ ಸಂಶೋಧನೆಯ ಫಲವಲ್ಲ, ದಾಸ ಸಾಹಿತ್ಯವೇ ಈ ಬರವಣಿಗೆಗೆ ಪ್ರೇರೇಪಿಸಿತು ಎಂದರೆ ತಪ್ಪಾಗಲಾಗದು. ಕೀರ್ತನೆಗಳಲ್ಲಿ ಅಡಗಿರುವ ಸಂಖ್ಯೆಗಳ ಸೊಬಗು, ಅನುಪಾತಗಳ ಸರಳತೆ, ಕಾಲಮಾನದ ಲೆಕ್ಕ ಹಾಗೂ ಅನಂತ – ಶೂನ್ಯಗಳ ತತ್ವ ಇವುಗಳನ್ನು ಓದುಗರೊಂದಿಗೆ ಹಂಚಿಕೊಳ್ಳುವ ವಿನಮ್ರ ಪ್ರಯತ್ನ.

ಈ ಪ್ರಯಾಣದಲ್ಲಿ ಏನಾದರು ಗಣಿತದ ತಪ್ಪುಗಳಿದ್ದರೆ ಅದನ್ನು ನನ್ನ ಅಜ್ಞಾನಕ್ಕೆ ಸೇರಿಸಿ ಕ್ಷಮಿಸಿ.

# ಮುನ್ನುಡಿ

ದಾಸ ಸಾಹಿತ್ಯವು ಭಕ್ತಿ, ನೀತಿ ಮತ್ತು ಜೀವನ ಮೌಲ್ಯಗಳ ಸಾಗರ. ಆದರೆ ಈ ಭಾವಗಾನಗಳ ಮದ್ಯೆ ಅಡಗಿರುವ ಗಣಿತದ ಮುತ್ತುಗಳನ್ನು ಅನೇಕರು ಗಮನಿಸಿಲ್ಲ.

ಪುರಂದರದಾಸರು, ಕನಕದಾಸರು ಹಾಗೂ ಇತರ ದಾಸರು ತಮ್ಮ ಕೀರ್ತನೆಗಳಲ್ಲಿ ಭಕ್ತಿಭಾವದ ಜೊತೆಗೆ ತರ್ಕ, ಅಳತೆ, ಅನುಪಾತ, ಕ್ರಮ, ಸಂಖ್ಯೆ ಮುಂತಾದ ಗಣಿತದ ಅಂಶಗಳನ್ನು ಅದ್ಭುತವಾಗಿ ಜೋಡಿಸಿದ್ದಾರೆ.

ಭಕ್ತಿ ಪಥದಲ್ಲಿ ಸಾಗುತ್ತಿದ್ದರೂ, ಅವರ ಸಾಹಿತ್ಯದಲ್ಲಿ ಕಾಲಮಾನದ ಲೆಕ್ಕ, ಜೀವನದ ಹಂತಗಳ ಅಳತೆ, ನಿತ್ಯ ಜೀವನದ ಪರಿಮಾಣ– ಪ್ರಮಾಣಗಳು ಮತ್ತು ಅನಂತ–ಶೂನ್ಯಗಳ ತತ್ವಗಳನ್ನು ಸುಂದರವಾಗಿ ನಿರೂಪಿಸಿದ್ದಾರೆ. ಈ ಗಣಿತೀಯ ಅಂಶಗಳು ಕೇವಲ ಲೆಕ್ಕಾಚಾರದ ವಿಷಯವಲ್ಲ, ಅವು ಜೀವನದ ತತ್ವವನ್ನು ತಲುಪಿಸಲು ಸಾಧನಗಳೂ ಆಗಿವೆ.

ಈ ಕೃತಿಯಲ್ಲಿ, ದಾಸ ಸಾಹಿತ್ಯದ ಆಯ್ದ ಕೀರ್ತನೆಗಳ ಮೂಲಕ ಗಣಿತದ ವಿವಿಧ ತತ್ವಗಳನ್ನು ಹಂತಹಂತವಾಗಿ ಪರಿಚಯಿಸಲಾಗಿದೆ. ಓದುಗರು ಕೇವಲ ಸಾಹಿತ್ಯದ ಸೊಗಸನ್ನು ಅನುಭವಿಸುವುದಲ್ಲ, ಗಣಿತವು ಹೇಗೆ ಭಕ್ತಿಯೊಂದಿಗೆ ಬೆಸೆದುಕೊಂಡಿದೆ ಎಂಬುದನ್ನು ಅರಿತುಕೊಳ್ಳುವರು.

ಭಕ್ತಿ ಮತ್ತು ವಿಜ್ಞಾನ ಒಂದರನ್ನೊಂದು ಪೂರೈಸುತ್ತವೆ ಎಂಬ ಸತ್ಯವನ್ನು ಈ ಪುಸ್ತಕದಿಂದ ಓದುಗರಿಗೆ ತಿಳಿಸುವುದು ನನ್ನ ಆಶಯ. ಈ ಪ್ರಯತ್ನವು ಓದುಗರಲ್ಲಿ ಸಾಹಿತ್ಯಾಸಕ್ತಿಯ ಜೊತೆಗೆ ಗಣಿತಾಸಕ್ತಿಯನ್ನು ಹೆಚ್ಚಿಸಲಿ ಎಂಬುದು ನನ್ನ ಹಾರೈಕೆ.

– ಕಾರ್ತಿಕ್. ಎಂ ಮಾಲೂರು

# ಪರಿವಿಡಿ


| | | |
|---|---|---|
| 1. | ತಂಬೂರಿ ಮೀಟಿದವ, ಭವಾಬ್ಧಿ ದಾಟಿದವ | 1 |
| 2. | ಜಗದೋದ್ಧಾರನ ಆಡಿಸಿದಳೆಶೋದಾ | 3 |
| 3. | ಡಿಂಬದಲ್ಲಿರುವ ಜೀವ ಕಂಬಸೂತ್ರ ಬೊಂಬೆಯಂತೆ | 5 |
| 4. | ಅಂಬಿಗ ನಾ ನಿನ್ನ ನಂಬಿದೆ | 8 |
| 5. | ಯಾರಿಗೆ ಯಾರುಂಟು ಎರವಿನ ಸಂಸಾರ | 12 |
| 6. | ಹರಿಚಿತ್ತಸತ್ಯ | 15 |
| 7. | ನಿಂದಕರಿರಬೇಕು | 18 |
| 8. | ದಾಸನಮಾಡಿಕೋ ಎನ್ನ | 21 |

# ಲೇಖಕರ ಬಗ್ಗೆ



ಕಾರ್ತಿಕ್ ಎಂ ರವರು ಮೂಲತಃ ಕೋಲಾರ ಜಿಲ್ಲೆಯ ಮಾಲೂರಿನವರು. ಜೀವನೋಪಾಯಕ್ಕಾಗಿ ಸಾಫ್ಟ್‌ವೇರ್ ಅಭಿವೃದ್ಧಿ ಕ್ಷೇತ್ರದಲ್ಲಿ ೧೦ಕ್ಕೂ ಹೆಚ್ಚು ವರ್ಷಗಳಿಂದ ಕೆಲಸ ಮಾಡುತ್ತಿದ್ದರೂ, ಹೃದಯದಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಯ ಮೇಲಿನ ಅಭಿಮಾನವನ್ನು ಸದಾ ಜೀವಂತವಾಗಿಟ್ಟುಕೊಂಡಿದ್ದಾರೆ. ತಂತ್ರಜ್ಞಾನದ ಮಧ್ಯೆಯೂ ಭಾವನೆಗಳನ್ನೂ, ಗಣಿತದ ನಡುವೆಯೂ ಸಾಹಿತ್ಯದ ಸೌಂದರ್ಯವನ್ನೂ ಕಾಣುವ ಮನಸ್ಸು ಇವರದು. ಇದೇ ಹಂಬಲ ಈ ಪುಸ್ತಕಕ್ಕೆ ರೂಪ ನೀಡುವಂತೆ ಪ್ರೇರಣೆಯಾಯಿತು.

ಲೇಖಕರು ಕಲೆಯ ಲೋಕದಲ್ಲೂ ತೊಡಗಿಸಿಕೊಂಡಿದ್ದಾರೆ. ಮಂಡಲ ಕಲೆಯ ಸೂಕ್ಷ್ಮ ವಿನ್ಯಾಸಗಳನ್ನು ಸೃಷ್ಟಿಸುವಲ್ಲಿ ಅವರಿಗೆ ಅಪಾರ ಆಸಕ್ತಿ. ವರ್ಲಿ ಕಲೆಯ ಮೂಲಕ ಹಳ್ಳಿಯ ಜೀವನದ ಸೌಂದರ್ಯವನ್ನು ಚಿತ್ರಿಸುವಲ್ಲಿ ಅವರು ಸಂತೋಷ ಪಡುವರು.  ಚಿತ್ರಕಲೆ ಹಾಗೂ ಆಕರ್ಷಕ ರಂಗೋಲಿಗಳ ರಚನೆಯಲ್ಲಿ ಅವರ ಕೈಚಳಕ ಮೆರೆದಿದೆ. ಹಬ್ಬ-ಹರಿದಿನಗಳಲ್ಲಿ ಮನಮೋಹಕ ರಂಗೋಲಿಗಳಿಂದ ಮನೆ ತುಂಬಿಸಲು ಅವರಿಗೆ ವಿಶೇಷ ಉತ್ಸಾಹ. ಮಂಡಲ ಮತ್ತು ವರ್ಲಿ ಕಲೆಯ ಸಂಯೋಜನೆಯಿಂದ ಹೊಸ ಕಲ್ಪನೆಗಳನ್ನು ಹುಟ್ಟು ಹಾಕುವುದು ಅವರ ವೈಶಿಷ್ಟ್ಯ. ಕಲೆಯ ಮೂಲಕ ಮನಸ್ಸಿಗೆ ಶಾಂತಿ ಮತ್ತು ನೆಮ್ಮದಿ ದೊರೆಯುತ್ತದೆ ಎಂಬ ನಂಬಿಕೆಯಿಂದ ಅವರು ಈ ಹವ್ಯಾಸಗಳನ್ನು ಬೆಳೆಸಿಕೊಂಡಿದ್ದಾರೆ. ಕಲೆಯೊಂದರಲ್ಲೂ ತಮ್ಮದೇ ಆದ ಶೈಲಿಯನ್ನು ರೂಪಿಸಿಕೊಂಡಿರುವ ಲೇಖಕರು, ಸಾಹಿತ್ಯ ಮತ್ತು ಕಲೆಯನ್ನು ಸಮನಾಗಿ ಸಾಗಿಸಿಕೊಂಡು ಹೋಗುತ್ತಿದ್ದಾರೆ.

Selfypage Developers Pvt Ltd

E-ISBN: 978-1-68576-602-3

MRP Rs. 160/-